ಮಧ್ಯವರ್ತಿಗಳ ಕಾಟವನ್ನು ತಪ್ಪಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎನ್ನುವ ವಿಷಯವನ್ನು ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ತಾವು ಹೇಳುವುದು ಬಹಳ ಒಳ್ಳೆಯದೇ ಆಯಿತು. ಮಧ್ಯವರ್ತಿಗಳು ಹೋಗಿ ಹಣವನ್ನು ಕೊಟ್ಟು ಕಡಿಮೆ ಬೆಲೆಗೆ ತರಕಾರಿಯನ್ನು ಕೊಂಡುಕೊಳ್ಳುತ್ತಾರೆ. ನಮ್ಮ ಸೊಸೈಟಿಯವರು ಏನು ಮಾಡುತ್ತಾರೆಂದರೆ ತಕ್ಷಣವೇ ರೈತರಿಂದ ಯಾವ ಪದಾರ್ಥವನ್ನೂ ಹಣವನ್ನು ಕೊಟ್ಟು ಕೊಂಡುಕೊಳ್ಳುವಂತಹ ವ್ಯವಸ್ಥೆ ಇಲ್ಲ. ಟೊಮೊಟೋ ಮುಂತಾದ ಎಲ್ಲಾ ತರಕಾರಿಗಳು ಬೇಗನೆ ಹಾಳಾಗುತ್ತವೆ. ಆದ್ದರಿಂದ ನೇರವಾಗಿ ರೈತರಿಗೆ ಹಣ ಕೊಟ್ಟು, ಕೊಂಡುಕೊಂಡು ಮಾರಾಟ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೀರಾ ?

ಶ್ರೀ ಸೋಮಶೇಖರ್.—ಆ ರೀತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ವೇದಾಂತ ಹೆಬ್ಬಾರ್.—ಮಾರುಕಟ್ಟೆಗೆ ಯಾವ ಹಳ್ಳಿಯಿಂದ ರೈತರು ತರಕಾರಿಯನ್ನು ತರುತ್ತಾರೋ, ಅಲ್ಲಿ ಮಧ್ಯವರ್ತಿಗಳು ರೈತರಿಗೆ ಅಡ್ಡಿಪಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಸೋಮಶೇಖರ್.—ಸರ್ಕಾರದ ಗಮನಕ್ಕೆ ಬಂದಿಲ್ಲ. ಗಮನಕ್ಕೆ ಬಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಸಂದರ್ಶನ ನಡೆದಿರುವ ಕೃಷಿ ಸಹಾಯಕರ ಹುದ್ದೆಗಳನ್ನು ಭರ್ತಿ ಮಾಡುವುದು

೩೫೦. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕೃಷಿ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಮಂಜೂರಾಗಿರುವ ಕೃಷಿ ಸಹಾಯಕ ಹುದ್ದೆಗಳ ಸಂಖ್ಯೆ ಎಷ್ಟು,

(ಆ) ಈ ಹಾಲಿ ಉದ್ಯೋಗದಲ್ಲಿರುವವರ ಸಂಖ್ಯೆ ಎಷ್ಟು,

(ಇ) ಈಗ್ಗೆ ಒಂದು ವರ್ಷದ ಹಿಂದೆ ಕೃಷಿ ಸಹಾಯಕರನ್ನು ನೇಮಿಸಲು ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದದ್ದು ನಿಜವೆ,

(ಈ) ಹಾಗಿದ್ದಲ್ಲಿ, ಸಂದರ್ಶನ ನಡೆಸಿ ನೇಮಕಾತಿ ಮಾಡಲಾಗಿದೆಯೇ ?

ಶ್ರೀ ಎಂ. ಪಿ. ಪ್ರಕಾಶ (ಮಾನ್ಯ ಕೃಷಿ ರಾಜ್ಯ ಮಂತ್ರಿಗಳು).—

(ಅ) ೭೯೫.

(ಆ) ೫೯೧.

(ಇ) ಹೌದು.

(ಈ) ಶೀಘ್ರದಲ್ಲಿ ನೇಮಕಾತಿ ಮಾಡಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಅಗ್ರಿಕಲ್ಚರಲ್ ಅಸಿಸ್ಟೆಂಟ್ಸ್ ಹುದ್ದೆಗೆ ಸಂದರ್ಶನ ನಡೆಸಿ ಒಂದು ವರ್ಷವಾಯಿತು. ಆದರೂ ಸಹ ಇವರನ್ನು ಕೆಲಸಕ್ಕೆ ತೆಗೆದುಕೊಳ್ಳದಿದ್ದರೆ ಅವರ ಪರಿಸ್ಥಿತಿ ಏನಾಗಬೇಕು? ಇಲ್ಲಿ ಶೀಘ್ರದಲ್ಲಿಯೇ ನೇಮಕಾತಿ ಮಾಡಲಾಗುವುದೆಂದು ಹೇಳಿದ್ದಾರೆ. ಎಂದರೆ ಇನ್ನು ೫೫ ದಿವಸಗಳಲ್ಲಿ ನೇಮಕಾತಿಯನ್ನು ಮಾಡುತ್ತೀರಾ ಅಥವಾ ಒಂದು ತಿಂಗಳಲ್ಲಿ ಮಾಡುತ್ತೀರಾ? ಜಾಗ್ರತೆ ಮಾಡಲು ಇರುವ ತೊಂದರೆಗಳು ಏನು?

ಶ್ರೀ ಎಂ.ಪಿ. ಪ್ರಕಾಶ್.—ಈ ಹಿಂದೆ ನೇಮಕವಾಗಿದ್ದ ನೇಮಕಾತಿ ಸಮಿತಿಯನ್ನು ಕೆಲವೊಂದು ಕಾರಣಗಳಿಂದ ರದ್ದು ಮಾಡಲಾಯಿತು. ನಂತರ ತಾ. ೧೬-೧-೧೯೮೪ರಂದು ಮತ್ತೊಂದು ನೇಮಕಾತಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯವರು ಸಂದರ್ಶನ ನಡೆಸುವ ಸಮಯದಲ್ಲಿ ಶ್ರೇಷ್ಠ ನ್ಯಾಯಾಲಯದವರು ತಡೆಯಾಜ್ಞೆ ಕೊಟ್ಟರು. ನಂತರ ಸಂದರ್ಶನ ನಡೆಸಬಹುದು, ಆದರೆ ಅದನ್ನು ಪ್ರಕಟಣೆ ಮಾಡಬಾರದೆಂದು ಪುನರ್‌ವಿಮರ್ಶಿತ ಆಜ್ಞೆಯನ್ನು ಹೈಕೋರ್ಟಿನವರು ಹೊರಡಿಸಿದರು. ಈಗ ನಾಲ್ಕು ರಿಟ್ ಪಿಟಿಷನ್ ಅರ್ಜಿಗಳು ಸಹ ವಜಾ ಆಗಿವೆ. ಕೋರ್ಟಿನಲ್ಲಿ ನಮ್ಮ

ಪರವಾಗಿ ತೀರ್ಮಾನವಾಗಿದೆ. ಆದ್ದರಿಂದ ತಾ. ೧೬–೭–೧೯೯೫ರಂದು ಅಭ್ಯರ್ಥಿಗಳ ಅಂಕಗಳನ್ನು ಪ್ರಕಟಣೆ ಮಾಡಲಾಯಿತು. ಇನ್ನು ಒಂದು ತಿಂಗಳಲ್ಲಿ ಅವರನ್ನು ನೇಮಕಾತಿ ಮಾಡಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ತಮಗೆ ಧನ್ಯವಾದಗಳು.

ಶ್ರೀ ಎಂ.ಪಿ. ಪ್ರಕಾಶ್.—ತಮ್ಮ ಧನ್ಯವಾದವನ್ನು ನಾನು ಸ್ವೀಕಾರ ಮಾಡಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕೃಷಿ ರಾಜ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಗ್ರಾಮೀಣಾಭಿವೃದ್ಧಿ ಸಚಿವರಿಗೆ ಈ ಪ್ರಶ್ನೆಗೆ ಉತ್ತರ ಕೊಡಲು ಕಳುಹಿಸಿಕೊಡಲಾಗಿತ್ತು. ಆದರೆ, ಈಗ ನನ್ನ ಬಳಿಯೇ ವಿವರಗಳು ಇರುವುದರಿಂದ ನಾನು ಉತ್ತರ ಕೊಡುತ್ತಿದ್ದೇನೆ.

ಗ್ರಾಮ ಸೇವಕರು ಹಾಗೂ ಕೃಷಿ ಸಹಾಯಕರು ಅವರು ಕೆಲಸಮಾಡುತ್ತಿರುವ ಗ್ರಾಮಗಳಲ್ಲಿ ವಾಸಿಸುವುದು

೫೦೭. ಶ್ರೀಮತಿ ಸುಮಾ ವಸಂತ.— ಈ ಕೆಳಕಂಡ ಪ್ರಶ್ನೆಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಒಟ್ಟು ಮಂಜೂರಾಗಿರುವ ಗ್ರಾಮ ಸೇವಕ ಮತ್ತು ಕೃಷಿ ಸಹಾಯಕರ ಸಂಖ್ಯೆ ಎಷ್ಟು?

ಆ) ಈಗ ಹಾಲಿ ಕೆಲಸದಲ್ಲಿರುವವರ ಸಂಖ್ಯೆ ಎಷ್ಟು? ಹಾಗೂ ಖಾಲಿ ಇರುವ ಗ್ರಾಮ ಸೇವಕರ ಹುದ್ದೆಗಳಸಂಖ್ಯೆ ಎಷ್ಟು?

ಇ) ಗ್ರಾಮ ಸೇವಕರು ಮಂತ್ತು ಕೃಷಿ ಸಹಾಯಕರು ತಾವು ಕೆಲಸ ಮಾಡುತ್ತಿರುವ ಗ್ರಾಮಗಳಲ್ಲಿ ವಾಸಿಸಬೇಕೆಂದು ಸರ್ಕಾರಿ ನಿಯಮ ಇದೆಯೆ?

ಈ) ಹಾಗಿದ್ದಲ್ಲಿ ವಿರಾಜಪೇಟೆ ಕ್ಷೇತ್ರದಲ್ಲಿ ಕೆಲವು ಗ್ರಾಮ ಸೇವಕರು ಮತ್ತು ಕೃಷಿ ಸಹಾಯಕರು ತಮಗೆ ನಿಯಮಿಸಿದ ಹಳ್ಳಿಗಳಲ್ಲಿ ವಾಸಿಸದೇ ಬೇರೆ ಕಡೆ ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).–

ಅ)

ಗ್ರಾ. ಸೇ.	ಕೃ.ಸ.	ಒಟ್ಟು
೩೦	೬೦	೯೦

ಆ)

	ಗ್ರಾ. ಸೇ.	ಕೃ. ಸ.	ಒಟ್ಟು
ಕೆಲಸ ಮಾಡುವವರು	೨೪	೧೮	೪೨
ಖಾಲಿ ಹುದ್ದೆಗಳು	೬	೪೨	೪೮

ಇ) ಹೌದು.

ಈ) ಇದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಶ್ರೀಮತಿ ಸುಮಾ ವಸಂತ.—ಗ್ರಾಮಸೇವಕರುಗಳು ಆಯಾ ಗ್ರಾಮಗಳಲ್ಲಿಯೇ ವಾಸ ಮಾಡಲು ಅನುಕೂಲವಾಗುವಂತೆ ವಸತಿ ಸೌಕರ್ಯವನ್ನು ಒದಗಿಸಿಕೊಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್.—ಇಡೀ ರಾಜ್ಯಾದಂತ ಒಂದೇ ಸಲ ಎಲ್ಲರಿಗೂ ವಸತಿ ಸೌಕರ್ಯ ಕಲ್ಪಿಸಿ ಕೊಡುವುದಕ್ಕಾಗುವುದಿಲ್ಲ. ಇದನ್ನು ಹಂತಹಂತವಾಗಿ ಕೈಗೊಳ್ಳುತ್ತಿದ್ದೇವೆ. ಈ ಗ್ರಾಮ ಸೇವಕರು ಮಂತ್ತು ಕೃಷಿ ಸಹಾಯಕರು ತಮ್ಮ ತಮ್ಮ ಕೇಂದ್ರಗಳಲ್ಲಿಯೇ ಇರಬೇಕಾಗುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಈಗ ಇವರಿಗಾಗಿ ಕಟ್ಟಿಸಿರುವ ಮನೆಗಳಲ್ಲಿ ಇವರು ವಾಸ ಮಾಡದಿರುವ ಕಾರಣದಿಂದ, ಅಲ್ಲಿ ಹಾವು ಮುಂತಾದ ಪ್ರಾಣಿಗಳು ಸೇರಿಕೊಂಡಿವೆ. ಈ ಮನೆಗಳಿಗೆ ಹಾಕಿರುವ ಹಾಗಿಲು ಮತ್ತು ಕಿಟಕಿಗಳನ್ನೆಲ್ಲಾ ಜನರು ಕಿತ್ತುಕೊಂಡು ಹೋಗುತ್ತಿದ್ದಾರೆ. ಇದರಿಂದ ಅವು ವಾಸಕ್ಕೆ ಯೋಗ್ಯವಾಗಿಲ್ಲ. ಇದಕ್ಕೆಲ್ಲಾ ಯಾರು ಜವಾಬ್ದಾರರು?